# ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

## ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560 018

ಸಂಖ್ಯೆ: ಕಸಂವಿ:ಅಧಿಸೂಚನೆ/ವಿ.ಮ.ವಿ.ಉ/ಪರೀಕ್ಷೆಗಳು/13/2012–13 ದಿನಾಂಕ: 20.12.2012

### ಅಧಿಸೂಚನೆ

**ವಿಷಯ: 2012–13ನೇ ಸಾಲಿನ ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಮತ್ತು ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ ರೆಗ್ಯುಲರ್ ಮತ್ತು ಖಾಸಗಿ ಪರೀಕ್ಷೆಗಳಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗೆಗೆ.**

| ಅಭ್ಯರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | ಸದರಿ ಕಾಲೇಜಿನವರು ಬ್ಯಾಂಕ್ ಹುಂಡಿ ಪಡೆಯುವ ದಿನಾಂಕ | ಕಾಲೇಜಿನಿಂದ ಬ್ಯಾಂಕ್ ಹುಂಡಿಗಳ ಸಹಿತ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ರವಾನಿಸುವ ದಿನಾಂಕ |
|---|---|---|
| **31.01.2013** | **02.02.2013** | **11.02.2013** |

**ಸೂಚನೆಗಳು:**

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಅಧಿಕೃತ ಮಾನ್ಯತೆ ಪಡೆದ ಖಾಸಗಿ ಹಾಗೂ ಸರ್ಕಾರಿ ಸಂಸ್ಕೃತ ಕಾಲೇಜುಗಳು ಮಾತ್ರ ಅರ್ಜಿ ಸಲ್ಲಿಸಬಹುದಾಗಿದೆ.
2. ಪರೀಕ್ಷಾ ಶುಲ್ಕದ ಹುಂಡಿ (ಡಿ.ಡಿ.)ಯನ್ನು ನಿಗದಿತ ದಿನಾಂಕದಂದು **"ಹಣಕಾಸು ಅಧಿಕಾರಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಬೆಂಗಳೂರು (Finance Officer, Karnataka Sanskrit University, Bangalore)"** ಈ ಹೆಸರಿನಲ್ಲಿ ಪಡೆದು ಅರ್ಜಿಯೊಂದಿಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸುವುದು. ಅಥವಾ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಚಾಮರಾಜಪೇಟೆ ಶಾಖೆ, ಬೆಂಗಳೂರು ಈ ಬ್ಯಾಂಕಿನ ಉಳಿತಾಯ ಖಾತೆ ಸಂಖ್ಯೆ: **64069994360** ಈ ಖಾತೆಗೆ ಹಣವನ್ನು ಜಮಾ ಮಾಡಿ ಚಲನ್ ಅನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಲು ಸೂಚಿಸಿದೆ.
3. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
4. **ಬಿ.ಎ.** ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಮೊದಲ ಹಾಗೂ ಎರಡನೇ ವರ್ಷದ ಪರೀಕ್ಷೆಗಳು ಹೊಸ ಪಠ್ಯಕ್ರಮಗಳಿಗನುಗುಣವಾಗಿ ಮತ್ತು **ಬಿ.ಎ.** ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಮೂರನೆಯ ವರ್ಷದ ಪರೀಕ್ಷೆಯು ಹಳೆಪಠ್ಯಕ್ರಮದ ಅನುಗುಣವಾಗಿ ನಡೆಯುತ್ತದೆ.
5. **ಎಂ.ಎ.** ಸಂಸ್ಕೃತ/ವೇದ ವಿದ್ವದುತ್ತಮಾ ಪ್ರಥಮವರ್ಷ ಮತ್ತು ಅಂತಿಮ ವರ್ಷದ ಪರೀಕ್ಷೆಗಳು ಹೊಸ ಪಠ್ಯಕ್ರಮಗಳಿಗನುಗುಣವಾಗಿ ನಡೆಯುತ್ತವೆ. 2012 ಮತ್ತು ಅದಕ್ಕಿಂತ ಹಿಂದೆ ಅಂತಿಮ ವರ್ಷದಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಮಾತ್ರ ಹಳೆ ಪಠ್ಯಕ್ರಮಗಳಿಗನುಗುಣವಾಗಿ ಪರೀಕ್ಷೆಯು ನಡೆಯುತ್ತವೆ.
6. **ಬಿ.ಎ.** ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಮತ್ತು **ಎಂ.ಎ.** ಸಂಸ್ಕೃತ/ವೇದ ವಿದ್ವದುತ್ತಮಾ ಕಾಲೇಜು ವಿದ್ಯಾರ್ಥಿ (ರೆಗ್ಯುಲರ್) ಪುನರಾವರ್ತಿತ ಹಾಗೂ ಖಾಸಗಿ ಅಭ್ಯರ್ಥಿಗಳಿಗೆ ಪ್ರತ್ಯೇಕ ಅರ್ಜಿ ನಮೂನೆಗಳಿರುವುದಿಲ್ಲ. ವಿಶ್ವವಿದ್ಯಾಲಯವು ನೀಡಿರುವ ಅಧಿಕೃತ ನಮೂನೆಯಲ್ಲಿ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸಿ ಸಲ್ಲಿಸುವುದು.
7. ಅರ್ಜಿಗಳೊಂದಿಗೆ ಸಲ್ಲಿಸುವ ನಾಮಾಂಕಿತ ಪಟ್ಟಿಯಲ್ಲಿ ಕೇಂದ್ರ ಸಂಖ್ಯೆ, ಹೆಸರು ಹಾಗೂ ಕಾಲೇಜಿನ ಸಂಕೇತ ಸಂಖ್ಯೆ, ಹೆಸರು ಹಾಗೂ ಅಂಚೆ ಕಛೇರಿಯ ಪಿನ್‌ಕೋಡ್ ನಂಬರ್‌ಗಳನ್ನು ಸ್ಪಷ್ಟವಾಗಿ ನಮೂದಿಸುವುದು.

8. **ಬಿ.ಎ.** ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಮತ್ತು **ಎಂ.ಎ.** ಸಂಸ್ಕೃತ/ವೇದ ವಿದ್ವದುತ್ತಮಾ ಕಾಲೇಜು ಅಭ್ಯರ್ಥಿಗಳಾಗಿದ್ದರೆ **'ಎಫ್'** ಎಂದೂ, **ಪುನರಾವರ್ತಿತ** ಅಭ್ಯರ್ಥಿಗಳಾಗಿದ್ದರೆ **'ಆರ್'** ಎಂದೂ, ಖಾಸಗಿ ಅಭ್ಯರ್ಥಿಗಳಾಗಿದ್ದರೆ **'ಪಿ'** ಎಂದೂ ಅರ್ಜಿಯ ಮೇಲೆ ಬಲತುದಿಯಲ್ಲಿ ಕೆಂಪು ಶಾಯಿಯಲ್ಲಿ ಅಡ್ಡಗೆರೆ ಗುರುತು ಮಾಡಿ **ಬೇಡವಾದದ್ದನ್ನು ಹೊಡೆದು ಹಾಕಬೇಕು.**
9. ಪರೀಕ್ಷೆಯ ನಂತರ ವಿನಾಯಿತಿ ಕೋರಿ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
10. ಪರೀಕ್ಷೆ ತೆಗೆದುಕೊಳ್ಳುವ ಎಲ್ಲ ಅಭ್ಯರ್ಥಿಗಳಿಂದ ಇತ್ತೀಚಿನ ಎರಡು ಭಾವಚಿತ್ರಗಳನ್ನು ಪಡೆದು ಒಂದನ್ನು ಅರ್ಜಿಗೂ ಮತ್ತೊಂದನ್ನು ಪ್ರವೇಶ ಪತ್ರಕ್ಕೂ ಲಗತ್ತಿಸಿ ದೃಢೀಕರಿಸಿ ಕಳುಹಿಸುವುದು.
11. ಪುನರಾವರ್ತಿತ(ರಿಪೀಟರ್) ಅಭ್ಯರ್ಥಿಗಳು ಮತ್ತು ಒಮ್ಮೆ ಖಾಸಗಿಯಾಗಿ ಪರೀಕ್ಷೆ ತೆಗೆದುಕೊಂಡಿದ್ದ ಅಭ್ಯರ್ಥಿಗಳು ಈ ಹಿಂದೆ ಪರೀಕ್ಷೆ ತೆಗೆದುಕೊಂಡಿದ್ದ ಕಾಲೇಜಿನ ಮೂಲಕವೇ ಅರ್ಜಿ ಸಲ್ಲಿಸುವುದು. ಕೇಂದ್ರ ಬದಲಾವಣೆ ಹೊಂದಿದ ಹಾಗೂ ಅಪೂರ್ಣವಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಇಂತಹ ಪ್ರಸಂಗಕ್ಕೆ ಕಾಲೇಜುಗಳ ಪ್ರಾಚಾರ್ಯರು ಹೊಣೆಗಾರರಾಗಿರುತ್ತಾರೆ.
12. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಯಾವುದೇ ಸಂಸ್ಕೃತ ಕಾಲೇಜುಗಳಲ್ಲಿ ಬೇರೆ ವಿಭಾಗಕ್ಕೆ ಆ ಸಾಲಿನಲ್ಲಿ ಅಧಿಕೃತ (ಕಾಲೇಜು ಅಭ್ಯರ್ಥಿ) ವಿದ್ಯಾರ್ಥಿಯಾಗಿರಬಾರದು. ಮತ್ತು ನೇರವಾಗಿ ವಿಶ್ವವಿದ್ಯಾಲಯವನ್ನು ಅರ್ಜಿಯನ್ನು ಸಲ್ಲಿಸಬೇಕು.
13. ಒಂದು ಬಾರಿ ಪರೀಕ್ಷೆಗೆ ಕುಳಿತು ಅನುತ್ತೀರ್ಣರಾದ ಅಭ್ಯರ್ಥಿಗಳು ಪುನಃ ಅದೇ ಪರೀಕ್ಷೆಗೆ ಹಾಜರಾಗಲು ನೋಂದಣಿ ಮಾಡಿಕೊಳ್ಳಬೇಕಾಗಿಲ್ಲ.
14. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಿಂದ ಅನುಮತಿ ಪಡೆದಿರುವ ಶಾಸ್ತ್ರ ಭಾಗಗಳಿಗೆ ಮಾತ್ರ ಖಾಸಗಿ ಅಭ್ಯರ್ಥಿಗಳ ಅರ್ಜಿಗಳನ್ನು ಆ ವಿಷಯಕ್ಕೆ ಸಂಬಂಧಿಸಿದ ಸದರಿ ಕಾಲೇಜಿನ ಅಧ್ಯಾಪಕರು ದೃಢೀಕರಿಸಿದ ನಂತರ ಪ್ರಾಚಾರ್ಯರು ದೃಢೀಕರಿಸಿ ಕಳುಹಿಸುವುದು.
15. ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳಲು ಬಯಸುವ ವಿದ್ಯಾರ್ಥಿಗಳಿಂದ ಪರೀಕ್ಷಾ ಶುಲ್ಕದ ಜೊತೆಗೆ 500/– ರೂ.ಗಳನ್ನು ನೋಂದಣಿ ಶುಲ್ಕವಾಗಿ ಪಡೆಯುವುದು. ಈಗಾಗಲೇ ನೋಂದಾಯಿಸಿದ್ದಲ್ಲಿ ಪುನಃ ನೀಡಬೇಕಿಲ್ಲ.
16. ತರಗತಿವಾರು ಪರೀಕ್ಷಾ ಶುಲ್ಕವನ್ನು ಈ ಕೆಳಕಂಡ ಪಟ್ಟಿಯಲ್ಲಿ ತಿಳಿಸಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ವಿನಾಯಿತಿ ಪಡೆಯುವ ವಿದ್ಯಾರ್ಥಿಗಳು ತಹಶೀಲ್ದಾರ್‌ರವರಿಂದ ಪಡೆದ ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ದೃಢೀಕರಿಸಿ ಕಳುಹಿಸುವುದು. ನಕಲು ಪ್ರಮಾಣಪತ್ರಗಳು ಇಲ್ಲದಿದ್ದಲ್ಲಿ ಶುಲ್ಕದ ದುಪ್ಪಟ್ಟು ಹಣವನ್ನು ಪ್ರಾಚಾರ್ಯರೇ ಭರಿಸಬೇಕು.

| **ಕ್ರ.ಸಂ** | **ಪರೀಕ್ಷೆಗಳ ವಿವರ** | **ಪರೀಕ್ಷಾ ಶುಲ್ಕ** | **ಅರ್ಜಿ ಶುಲ್ಕ** | **ಅಂಕಪಟ್ಟಿ ಶುಲ್ಕ** | **ಒಟ್ಟು ಮೊತ್ತ** |
|---|---|---|---|---|---|
| **1.** | ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ | 120.00 | 05.00 | 05.00 | 130.00 |
| **2.** | ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ | 150.00 | 05.00 | 05.00 | 160.00 |
| **3.** | ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ | – | – | – | 500.00 |

17. ಹೊರ ರಾಜ್ಯದ ವರ್ಗಾವಣೆ ಪ್ರಮಾಣಪತ್ರವಾದಲ್ಲಿ (ಟ್ರಾನ್ಸ್‌ಫರ್ ಸರ್ಟಿಫಿಕೇಟ್) ಆ ರಾಜ್ಯದ ಸಂಬಂಧಪಟ್ಟ ವಿದ್ಯಾಧಿಕಾರಿಗಳಿಂದ ಮೇಲುಸಹಿ (ಕೌಂಟರ್‌ಸೈನ್) ಮಾಡಿಸಿರಬೇಕು. ವಲಸೆ ಪ್ರಮಾಣ ಪತ್ರವನ್ನು ಪಡೆದಿರಬೇಕು.
18. ಹೊರ ರಾಜ್ಯದಲ್ಲಿ ಸಂಸ್ಕೃತವನ್ನು ಅಧ್ಯಯನ ಮಾಡಿದ ಪ್ರಮಾಣಪತ್ರವನ್ನು ನೀಡಿ ಪರೀಕ್ಷೆಗೆ ಹಾಜರಾಗುವವರು ನಮ್ಮ ರಾಜ್ಯದ ಉನ್ನತ ಶಿಕ್ಷಣ ಇಲಾಖೆಯ ಸಚಿವಾಲಯದಿಂದ ಸಂಸ್ಕೃತ ಪರೀಕ್ಷೆಗೆ ಸಂಬಂಧಪಟ್ಟಂತೆ ಸಮಾನತೆಯ ಪ್ರಮಾಣಪತ್ರ (ಪ್ಯಾರಿಟಿ ಆಫ್ ಸ್ಟಾಂಡರ್ಡ್) ಪಡೆದು ಲಗತ್ತಿಸಬೇಕು.
19. ಜನ್ಮ ದಿನಾಂಕದ ಹಾಗೂ ಅಂಕಪಟ್ಟಿಯ ನಕಲು ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು.

20. ವಿದ್ವನ್ಮಧ್ಯಮಾ ಮತ್ತು ವಿದ್ವದುತ್ತಮಾ ಪರೀಕ್ಷೆಗಳಿಗೆ ಹಾಜರಾಗುವ ಕಾಲೇಜು ಅಭ್ಯರ್ಥಿಗಳ ಹಾಗೂ ಖಾಸಗಿ ಅಭ್ಯರ್ಥಿಗಳ ವ್ಯಾಸಂಗದ ಅವಧಿ (ಕೋರ್ಸ್ ಆಫ್ ಸ್ಟಡಿ) ಪೂರ್ಣವಾಗಿರಬೇಕು ಹಾಗೂ ಈ ಬಗ್ಗೆ ಕಾಲೇಜಿನ ಮುಖ್ಯಸ್ಥರು ದೃಢೀಕರಿಸಬೇಕು.
21. ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಾದಲ್ಲಿ ಅಂತಹ ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿ ಸಮೀಪದ ಪರೀಕ್ಷಾ ಕೇಂದ್ರಕ್ಕೆ ಲಗತ್ತಿಸಲಾಗುವುದು.
22. ಕಾಲೇಜು ವಿದ್ಯಾರ್ಥಿಗಳಿಗೆ (ರೆಗ್ಯುಲರ್) ಪ್ರವೇಶಾವಕಾಶಕ್ಕೆ ವಿಧಿಸಿರುವ ನಿಯಮಗಳು ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳಿಗೂ ಅನ್ವಯಿಸುತ್ತವೆ.

**ವಿಶೇಷ ಸೂಚನೆ :**

a) ಬಿ.ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ ಪ್ರಥಮ ಮತ್ತು ದ್ವಿತೀಯ ವರ್ಷ ಹೊಸ ಪಠ್ಯಕ್ರಮದಂತೆ ಮತ್ತು ಮೂರನೇ ವರ್ಷ ಹಳೆ ಪಠ್ಯಕ್ರಮದಂತೆ ಹಾಗೂ ಎಂ.ಎ. ಸಂಸ್ಕೃತ/ವೇದ ವಿದ್ವದುತ್ತಮಾ ಮೊದಲನೆಯ ವರ್ಷ ಮತ್ತು ಅಂತಿಮವರ್ಷ ಹೊಸ ಪಠ್ಯಕ್ರಮದಂತೆ ಹಾಗೂ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಹಳೆಪಠ್ಯಕ್ರಮದಂತೆ ಪರೀಕ್ಷೆಯನ್ನು ನಡೆಸಲಾಗುವುದು. ಈ ಎಲ್ಲಾ ನಾಲ್ಕು ವಿಭಾಗಗಳ ವಿದ್ಯಾರ್ಥಿಗಳ ಅರ್ಜಿ ಮತ್ತು ನಾಮಾಂಕಿತ ಪಟ್ಟಿಗಳನ್ನು ಪ್ರತ್ಯೇಕ, ಪ್ರತ್ಯೇಕವಾಗಿ ಸಲ್ಲಿಸುವುದು.

b) ಅಭ್ಯರ್ಥಿಯ ಹೆಸರು ಮತ್ತು ತಂದೆಯ ಹೆಸರನ್ನು ಅರ್ಜಿ ಮತ್ತು ನಾಮಾಂಕಿತ ಪಟ್ಟಿಗಳಲ್ಲಿ ಸಂಸ್ಕೃತ ಹಾಗೂ ಆಂಗ್ಲಭಾಷೆಯಲ್ಲಿ ಸ್ಪಷ್ಟವಾಗಿ ದಪ್ಪ ಅಕ್ಷರಗಳಲ್ಲಿ (ಕ್ಯಾಪಿಟಲ್ ಲೆಟರ್ಸ್) ನಮೂದಿಸಿ ಕಳುಹಿಸುವುದು.

c) ನಾಮಾಂಕಿತ ಪಟ್ಟಿಯಲ್ಲಿರುವ ಎಲ್ಲಾ ಮಾಹಿತಿಗಳನ್ನು ಪ್ರತ್ಯೇಕ ಫೈಲ್ ಮಾಡಿ ಗಣಕಯಂತ್ರದ (ಕಂಪ್ಯೂಟರ್) ನುಡಿ/ಬರಹ ತಂತ್ರಾಂಶದಲ್ಲಿ ಒಂದೇ ಸಿ.ಡಿ.ಯಲ್ಲಿ ಸಲ್ಲಿಸುವುದು.

d) ಸಿ.ಡಿ.ಯಲ್ಲಿ ನಮೂದಿಸಿರುವ ಮಾಹಿತಿಯನ್ನೇ ಅಂತಿಮವೆಂದು ಪರಿಗಣಿಸಲಾಗುವುದು. ಅದರಲ್ಲಿ ಉಂಟಾದ ತಪ್ಪುಗಳಿಗೆ ಸಂಬಂಧಿಸಿದ ಕಾಲೇಜಿನ ಪ್ರಾಚಾರ್ಯರೇ ಹೊಣೆಗಾರರಾಗಿರುತ್ತಾರೆ.

**e) ಖಾಸಗಿ ಅಭ್ಯರ್ಥಿಗಳು ನೇರವಾಗಿ ವಿದ್ವನ್ಮಧ್ಯಮಾ/ವಿದ್ವದುತ್ತಮಾ ಅಂತಿಮ ವರ್ಷದ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ.**

f) ವಿದ್ವನ್ಮಧ್ಯಮಾ–3ನೇ ವರ್ಷ ಹಳೇ ಪಠ್ಯಕ್ರಮದಂತೆ ಪರೀಕ್ಷೆಯನ್ನು ನಡೆಸಲಾಗುವುದು ಹಾಗೂ ವಿದ್ವದುತ್ತಮಾ 2ನೇ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳಿಗೆ ಹಳೆಯ ಪಠ್ಯಕ್ರಮದಲ್ಲಿಯೇ ಪರೀಕ್ಷೆ ನಡೆಸಲಾಗುವುದು. ಈ ಅವಕಾಶವನ್ನು 2013–14ನೇ ವರ್ಷದವರೆಗೆ ಮಾತ್ರ ನೀಡಲಾಗುವುದು.

g) ವಿದ್ವನ್ಮಧ್ಯಮಾ ಮೊದಲನೇ ವರ್ಷದ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ಅಭ್ಯರ್ಥಿಗಳ ವಯಸ್ಸು ದಿನಾಂಕ: 01.03.2013 ರಂದು ಕನಿಷ್ಟ 17 ವರ್ಷ ಹಾಗೂ ದ್ವಿತೀಯ ವರ್ಷದ ಪರೀಕ್ಷೆಗೆ ಕನಿಷ್ಟ 18 ವರ್ಷ ತುಂಬಿರಬೇಕು. ಪೂರ್ಣಗೊಂಡಿರಬೇಕು.

h) ವಿದ್ವನ್ಮಧ್ಯಮಾ ಪರೀಕ್ಷೆಯ ಒಂದು ಶಾಸ್ತ್ರಭಾಗದಲ್ಲಿ ಉತ್ತೀರ್ಣಗೊಂಡು ವಿದ್ವದುತ್ತಮಾ ಪರೀಕ್ಷೆಯಲ್ಲಿ ಮತ್ತೊಂದು ಶಾಸ್ತ್ರದ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಪ್ರವೇಶ ಪರೀಕ್ಷೆಯನ್ನು ಕಡ್ಡಾಯವಾಗಿ ಬರೆಯಬೇಕು.

i) ವಿದ್ವದುತ್ತಮಾ ಮೊದಲನೇ ವರ್ಷದ ಪರೀಕ್ಷೆಗೆ ಖಾಸಗಿಯಾಗಿ ಕುಳಿತುಕೊಳ್ಳುವ ಅಭ್ಯರ್ಥಿಗಳ ವಯಸ್ಸು 01.03.2013ರಂದು ಕನಿಷ್ಠ 20 ವರ್ಷ ಪೂರ್ಣಗೊಂಡಿರಬೇಕು.

j) ಪರೀಕ್ಷೆಗಳಲ್ಲಿ ವಿನಾಯಿತಿ ಬಯಸುವ ಹಳೆಯ ಪಠ್ಯಕ್ರಮದ ಖಾಸಗಿ ಅಭ್ಯರ್ಥಿಗಳು ಸಂಬಂಧಿಸಿದ ಮೂಲ ದಾಖಲೆಗಳ ನಕಲು ಪ್ರತಿಗಳನ್ನು ಆಯಾ ಕಾಲೇಜಿನ ಪ್ರಾಚಾರ್ಯರಿಂದ ದೃಢೀಕರಿಸಿ ಸಲ್ಲಿಸುವುದು.

k) ವಿದ್ವದುತ್ತಮಾ ತರಗತಿಗಳ ಕಾಲೇಜು, ಖಾಸಗಿ ಹಾಗೂ ಪುನರಾವರ್ತಿತ ಅಭ್ಯರ್ಥಿಗಳಿಗೆ (ಹೊಸ ಮತ್ತು ಹಳೆಯ ಪಠ್ಯಕ್ರಮಗಳನ್ನೊಳಗೊಂಡು) ವಾರ್ಷಿಕ ಪರೀಕ್ಷೆಯಲ್ಲಿ ಪ್ರತಿಯೊಂದು ಪತ್ರಿಕೆಗಳಿಗೆ 80 ಅಂಕಗಳನ್ನು ನಿಗದಿಪಡಿಸಲಾಗಿದೆ. ಇನ್ನುಳಿದ 20 ಅಂಕಗಳನ್ನು ಅಂತರಿಕ ಪರೀಕ್ಷೆಗಳಿಗಾಗಿ (Assignment/Project work) ನಿಗದಿಪಡಿಸಲಾಗಿದೆ. ಈ ಅಂತರಿಕ ಪರೀಕ್ಷೆಗಳನ್ನು ಆಯಾಯ ಕಾಲೇಜುಗಳ ಪ್ರಾಚಾರ್ಯರೇ ನಡೆಸಿ ಅಂಕಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವುದು.

l) ನೇರವಾಗಿ ಅರ್ಜಿ ಸಲ್ಲಿಸಿದ ಖಾಸಗಿ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ 20 ಅಂಕಗಳಿಗೆ 10 ಪುಟಗಳ ಪ್ರಬಂಧಗಳನ್ನು ಪ್ರತಿ ಪತ್ರಿಕೆಯ ವಿಷಯದಲ್ಲಿ ಸಲ್ಲಿಸಬೇಕು. ಕೊನೆಯ ದಿನಾಂಕ: 14.03.2013.

m) ಪ್ರತಿ ಪರೀಕ್ಷಾ ಕೇಂದ್ರದಲ್ಲಿ ಕನಿಷ್ಠ 20 ಅಭ್ಯರ್ಥಿಗಳು ಹಾಜರಾಗಬೇಕು. ಇಲ್ಲದೇ ಹೋದಲ್ಲಿ ಸಮೀಪದ ಕೇಂದ್ರಕ್ಕೆ ವರ್ಗಾಯಿಸಲಾಗುವುದು.

ಸಹಿ/–
**ಕುಲಸಚಿವರು**
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಬೆಂಗಳೂರು